ಸಾರ್ವಜನಿಕ ಶಿಕ್ಷಣ ಇಲಾಖೆ
ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು
Karnataka School Quality Assessment & Accreditation Council
ಕೆ.ಎಸ್.ಇ.ಇ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03. ದೂರವಾಣಿ ಸಂಖ್ಯೆ: 23341615, 23562283, 29720300
e-mail: ksqaacbangalore@gmail.com & ksqaacbengaluru@gmail.com

ಸಂಖ್ಯೆ:ಕೆ1/ಕೆ.ಎಸ್.ಕ್ಯು.ಎ.ಎ.ಸಿ/ಸ್ವಾ.ಸಾ.ಶಾಲೆ/20/2020–21 ದಿನಾಂಕ:29.03.2022

## ಸುತ್ತೋಲೆ

**ವಿಷಯ:–** ಉತ್ತಮ ಆಡಳಿತ ಹಾಗೂ ಶೈಕ್ಷಣಿಕ ನಿರ್ವಹಣೆಯನ್ನು ಹೊಂದಿರುವ ಸರ್ಕಾರಿ ಶಾಲೆಗಳನ್ನು ಗುರುತಿಸಿ 'ಸ್ವಾಭಿಮಾನಿ ಸಾರ್ವಜನಿಕ ಶಾಲೆ'–ಪ್ರಶಸ್ತಿಯನ್ನು ನೀಡುವ ಕುರಿತು

**ಉಲ್ಲೇಖ:** ಸರ್ಕಾರಿ ಆದೇಶ ಸಂಖ್ಯೆ: ಇಪಿ 170 ಎಸ್ಎಲ್‌ಬಿ 2020, ದಿನಾಂಕ: 13.11.2020

~*~*~*~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉತ್ತಮ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಹಾಗೂ ಗಮನಾರ್ಹ ಶೈಕ್ಷಣಿಕ ಸಾಧನೆಗೈದಿರುವ ಮತ್ತು ವಿಶಿಷ್ಠ ಅಂಶಗಳನ್ನು ಒಳಗೊಂಡಿರುವ ರಾಜ್ಯದ ಪ್ರತಿ ವಿಭಾಗದಿಂದ ಅತ್ಯುತ್ತಮವಾದ ಒಂದು ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಒಂದು ಸರ್ಕಾರಿ ಪ್ರೌಢಶಾಲೆಯನ್ನು ಅಂದರೆ ಪ್ರತಿ ವಿಭಾಗದಿಂದ 2 ಶಾಲೆಗಳಂತೆ 4 ವಿಭಾಗಗಳಿಂದ ಒಟ್ಟು 8 ಸರ್ಕಾರಿ ಶಾಲೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು **'ಸ್ವಾಭಿಮಾನಿ ಸಾರ್ವಜನಿಕ ಶಾಲೆ'** ಪ್ರಶಸ್ತಿಯನ್ನು ನೀಡಲು ಉಲ್ಲೇಖಿತ ಸರ್ಕಾರಿ ಆದೇಶ ಹೊರಡಿಸಲಾಗಿದೆ. ಅದರಂತೆ ಆಯ್ಕೆಯಾದ ಶಾಲೆಗಳಿಗೆ ಪ್ರೋತ್ಸಾಹ ಧನವನ್ನು ಬಹುಮಾನ ರೂಪದಲ್ಲಿ ನೀಡಲಾಗುವುದು.

ಸದರಿ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸುವ ಶಾಲೆಗಳನ್ನು ಆಯ್ಕೆ ಮಾಡಲು ತಾಲ್ಲೂಕು ಹಂತ, ಜಿಲ್ಲಾ ಹಂತ, ವಿಭಾಗ ಹಂತ ಮತ್ತು ರಾಜ್ಯ ಹಂತದಲ್ಲಿ ಸಮಿತಿಗಳನ್ನು ರಚಿಸಲಾಗಿದ್ದು, ಸಮಿತಿ ಸದಸ್ಯರು ಆಯಾ ಹಂತದಲ್ಲಿ ಆಯ್ಕೆಗೊಂಡ ಶಾಲೆಗಳಿಗೆ ಭೇಟಿ ನೀಡಿ ಸ್ವಾಭಿಮಾನಿ ಸಾರ್ವಜನಿಕ ಶಾಲೆ ಪ್ರಶಸ್ತಿಯನ್ನು ಪಡೆಯಲು ಹೊಂದಿರಬೇಕಾದ ಅಗತ್ಯ ಅರ್ಹತೆಗಳನ್ನು ಪರಿಶೀಲಿಸಿ ನೀಡುವ ವರದಿಯ ಆಧರಿಸಿ 04 ಸರ್ಕಾರಿ ಪ್ರಾಥಮಿಕ ಮತ್ತು 04 ಸರ್ಕಾರಿ ಪ್ರೌಢಶಾಲೆಗಳನ್ನು 'ಸ್ವಾಭಿಮಾನಿ ಸಾರ್ವಜನಿಕ ಶಾಲೆ'ಗಳೆಂದು ಘೋಷಿಸಿ, ಅಂತಹ ಪ್ರತಿ ಶಾಲೆಗೆ **ರೂ. 5.00 ಲಕ್ಷಗಳ** ಪ್ರಶಸ್ತಿ ನೀಡಲಾಗುವುದು.

### ಉದ್ದೇಶಗಳು:–

1. ಶೈಕ್ಷಣಿಕ, ಆಡಳಿತಾತ್ಮಕ ಹಾಗೂ ನಾವಿನ್ಯಯುತವಾಗಿ ಅಭಿವೃದ್ಧಿಯಾಗಿರುವ ಹಾಗೂ ಉತ್ತಮ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಶಾಲೆಗಳನ್ನು ಗುರುತಿಸುವುದು.
2. ಶಾಲೆಗಳ ಉತ್ತಮ ಅಭಿವೃದ್ಧಿ ಕಾರ್ಯಗಳನ್ನು ಶ್ಲಾಘಿಸಿ ಆರ್ಥಿಕ ನೆರವನ್ನು ನೀಡುವುದು.
3. ಶಾಲೆಯ ಸರ್ವಾಂಗೀಣ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿರುವ ಮುಖ್ಯ ಶಿಕ್ಷಕರು, ಶಿಕ್ಷಕ ವೃಂದ, ವಿದ್ಯಾರ್ಥಿಗಳು, ಪೋಷಕರು ಹಾಗೂ ಎಲ್ಲಾ ಭಾಗೀದಾರರನ್ನು ಶ್ಲಾಘಿಸಿ ಅವರನ್ನು ಮತ್ತಷ್ಟು ಪ್ರೇರೇಪಿಸುವುದು.
4. ನನ್ನ ಶಾಲೆ, ನನ್ನ ಕೊಡುಗೆ ಎಂಬ ಸಹಭಾಗಿತ್ವದ ಮನೋಭಾವವನ್ನು ಎಲ್ಲಾ ಭಾಗೀದಾರರಲ್ಲಿ ಉಂಟುಮಾಡುವುದು.
5. ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟ ಶಿಕ್ಷಣಕ್ಕೆ ಕೈಗೊಂಡಿರುವ ಕ್ರಮಗಳನ್ನು ಸಮುದಾಯಕ್ಕೆ ಪರಿಚಯಿಸುವುದು.
6. ಪ್ರಶಸ್ತಿಗೆ ಆಯ್ಕೆಯಾದ ಶಾಲೆಗಳನ್ನು ಮಾದರಿಯಾಗಿಟ್ಟುಕೊಂಡು ಉಳಿದ ಶಾಲೆಗಳ ಭಾಗೀದಾರರು ಕೂಡ ತಮ್ಮ ಶಾಲೆಗಳ ಉತ್ತಮ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ರೂಪಿಸಲು ಪ್ರೇರೇಪಿಸುವುದು.

**ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ: 31.03.2022**
**ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 13.04.2022**

**'ಸ್ವಾಭಿಮಾನಿ ಸಾರ್ವಜನಿಕ ಶಾಲೆ' ಕಾರ್ಯಕ್ರಮದಡಿಯಲ್ಲಿ ಶಾಲೆಯನ್ನು 08 ಪ್ರಮುಖ ಕ್ಷೇತ್ರಗಳಲ್ಲಿ ಮೌಲ್ಯಮಾಪನ ಮಾಡಲಾಗುವುದು.**

1. ಶಾಲಾ ಭೌತಿಕ ಪರಿಸರ ಹಾಗೂ ಮೂಲಭೂತ ಸೌಲಭ್ಯಗಳು.
2. ಶಾಲಾ ಶಿಕ್ಷಕರು – ಬೋಧನೆ ಮತ್ತು ವಿಶೇಷ ಸಾಧನೆಗಳು.
3. ವಿದ್ಯಾರ್ಥಿಗಳ ಕಲಿಕೆ – ಪಠ್ಯ, ಪಠ್ಯಪೂರಕ, ಪಠ್ಯೇತರ ಚಟುವಟಿಕೆಗಳಲ್ಲಿ ವಿಶೇಷ ಸಾಧನೆಗಳು.
4. ಶಾಲಾ ನಾಯಕತ್ವ ಮತ್ತು ನಿರ್ವಹಣೆ.
5. ಶಾಲೆ ಮತ್ತು ವಿದ್ಯಾರ್ಥಿಗಳ ಸ್ವಚ್ಛತೆ, ಆರೋಗ್ಯ ಮತ್ತು ಸುರಕ್ಷತೆ.
6. ಸಮುದಾಯದ ಸಹಭಾಗಿತ್ವ.
7. ಶಾಲೆಯಲ್ಲಿ ತಂತ್ರಜ್ಞಾನದ ಬಳಕೆ.
8. ಶಾಲಾ ವಿಶೇಷ ಸಾಧನೆಗಳು.

ಈ ಮೇಲಿನ ಅಂಶಗಳನ್ನು ಆಧರಿಸಿ ಶಾಲೆಯ ಶೈಕ್ಷಣಿಕ, ಆಡಳಿತಾತ್ಮಕ, ನಾವಿನ್ಯಯುತ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ಲಭ್ಯವಿರುವ ಸೌಲಭ್ಯಗಳು ಮತ್ತು ಪ್ರಗತಿಯನ್ನು ಆಧರಿಸಿ ಮೌಲ್ಯಮಾಪನ ಮಾಡಲಾಗುವುದು.

**ವ್ಯಾಪ್ತಿ:-**

–'ಸ್ವಾಭಿಮಾನಿ ಸಾರ್ವಜನಿಕ ಶಾಲೆ' ಪ್ರಶಸ್ತಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ **ಪ್ರಾಥಮಿಕ ಶಾಲಾ ವಿಭಾಗದಲ್ಲಿ ಕಿರಿಯ ಪ್ರಾಥಮಿಕ ಶಾಲೆ, ಹಿರಿಯ/ಮಾದರಿ ಪ್ರಾಥಮಿಕ ಶಾಲೆ, ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗಳನ್ನು ಒಳಗೊಂಡಿರುತ್ತದೆ.**

**–ಪ್ರೌಢಶಾಲಾ ವಿಭಾಗದಲ್ಲಿ ಉನ್ನತೀಕರಿಸಿದ ಪ್ರೌಢಶಾಲೆ(ಆರ್.ಎಂ.ಎಸ್.ಎ ಶಾಲೆಗಳು) ಮತ್ತು ಪ್ರೌಢಶಾಲೆಗಳು ಒಳಗೊಂಡಿರುತ್ತದೆ.**

ಈ ಮೇಲಿನ ಎಲ್ಲಾ ಹಂತದ ಹಾಗೂ ಎಲ್ಲಾ ಮಾಧ್ಯಮಗಳ ಶಾಲೆಗಳು ಕನಿಷ್ಠ 150 ವಿದ್ಯಾರ್ಥಿಗಳ ದಾಖಲಾತಿಯನ್ನು ಹೊಂದಿರಬೇಕು. ಸದರಿ ಪ್ರಶಸ್ತಿಗೆ **ಆದರ್ಶ ವಿದ್ಯಾಲಯಗಳು, ರಾಜ್ಯ ಸರ್ಕಾರದ ಅನುದಾನದಲ್ಲಿ ನಡೆಯುವ ವಸತಿ ಶಾಲೆಗಳು, ಕರ್ನಾಟಕ ಪಬ್ಲಿಕ್ ಶಾಲೆಗಳು(ಕೆ.ಪಿ.ಎಸ್.) ಹಾಗೂ ಶ್ರೀ. ಹೆಚ್. ಜಿ. ಗೋವಿಂದಗೌಡ ಪ್ರಶಸ್ತಿ ಪುರಸ್ಕೃತ ಶಾಲೆಗಳನ್ನು ಪರಿಗಣಿಸಲಾಗುವುದಿಲ್ಲ.**

**ಮೌಲ್ಯಮಾಪನ ವಿಧಾನ:-**

- ಶಾಲೆಯು ಪ್ರಸ್ತುತ ಹೇಗೆ ಕಾರ್ಯನಿರ್ವಹಿಸುತ್ತಿದೆ, ಶಾಲೆಯ ಸುಧಾರಣೆಯ ಕ್ಷೇತ್ರಗಳು, ಶಾಲೆಯ ಪ್ರಸ್ತುತ ಸ್ಥಿತಿಯನ್ನು ತಿಳಿದುಕೊಳ್ಳಲು ಅಗತ್ಯವಾದ ದಾಖಲೆಗಳು, ಶಾಲೆಯ ಕಾರ್ಯಕ್ಷಮತೆಗೆ ಹಾಗೂ ಸುಧಾರಣೆಗೆ ತೆಗೆದುಕೊಂಡಿರುವ ಕ್ರಮಗಳನ್ನು ಒಳಗೊಂಡಿರುತ್ತದೆ.
- ಅರ್ಜಿ ಸಲ್ಲಿಸುವ ಶಾಲೆಯ ಮುಖ್ಯಶಿಕ್ಷಕರು/ಪ್ರಾಂಶುಪಾಲರು, ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು, ಎಸ್.ಡಿ.ಎಂ.ಸಿ ಸದಸ್ಯರು ಮತ್ತು ಸಮುದಾಯದ ಸದಸ್ಯರು ಹಾಗೂ ಎಲ್ಲಾ ಭಾಗೀದಾರರನ್ನು ಒಳಗೊಂಡಂತೆ ಶಾಲೆಯ ಸುಧಾರಣೆಗೆ ಕೈಗೊಂಡ ಅಗತ್ಯ ಕ್ರಮಗಳು, ಶೈಕ್ಷಣಿಕ ಸಾಧನೆಗಳು ಹಾಗೂ ಇನ್ನಿತರೆ ಮಾಹಿತಿಗಳನ್ನು ಆನ್‌ಲೈನ್ ಅರ್ಜಿಯಲ್ಲಿನ 08 ಪ್ರಮುಖ ಕಾರ್ಯಕ್ಷೇತ್ರಗಳಲ್ಲಿನ ಮಾಹಿತಿಗಳನ್ನು ಭರ್ತಿ ಮಾಡಿಸುವ ಮೂಲಕ ಪಡೆಯಲಾಗುವುದು.
- ಅರ್ಜಿ ಸಲ್ಲಿಸುವ ಶಾಲೆಗಳನ್ನು ಆಯ್ಕೆ ಮಾಡಲು ಸರ್ಕಾರದ ಆದೇಶದಂತೆ ತಾಲ್ಲೂಕು ಹಂತ, ಜಿಲ್ಲಾ ಹಂತ, ವಿಭಾಗ ಹಂತ ಮತ್ತು ರಾಜ್ಯ ಹಂತದಲ್ಲಿ ಸಮಿತಿಗಳನ್ನು ರಚಿಸಲಾಗಿದ್ದು, ಸದರಿ ಸಮಿತಿಯ ಸದಸ್ಯರುಗಳು (ಸರ್ಕಾರದಿಂದ ಅನುಮೋದನೆಯಾದ ಆಯ್ಕೆ ಸಮಿತಿಯ ಪಟ್ಟಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ) ಅರ್ಜಿ ಸಲ್ಲಿಸಿದ ಶಾಲೆಗಳಿಗೆ ಭೇಟಿ ನೀಡಿ ಸ್ವಾಭಿಮಾನಿ ಸಾರ್ವಜನಿಕ ಶಾಲೆ ಪ್ರಶಸ್ತಿಯನ್ನು ಪಡೆಯಲು ಹೊಂದಿರಬೇಕಾದ ಅಗತ್ಯ ಅರ್ಹತೆಗಳನ್ನು ಪರಿಶೀಲಿಸಿ, ನೀಡುವ ಅಂಕಗಳ ಆಧಾರದ ಮೇಲೆ ಸ್ವಾಭಿಮಾನಿ ಸಾರ್ವಜನಿಕ ಶಾಲೆಯನ್ನು ಆಯ್ಕೆ ಮಾಡಲಾಗುವುದು.

- ಅರ್ಜಿಯಲ್ಲಿ ಭರ್ತಿ ಮಾಡಲಾಗಿರುವ ಮಾಹಿತಿಗಳಿಗೆ ಸಂಬಂಧಿಸಿದಂತೆ ಪೂರಕವಾದ ದಾಖಲೆಗಳನ್ನು ಶಾಲೆಯಲ್ಲಿ ಕಾಯ್ದಿರಿಸಿಕೊಂಡು ತಾಲ್ಲೂಕು / ಜಿಲ್ಲೆ / ವಿಭಾಗ / ರಾಜ್ಯ ಹಂತದ ಆಯ್ಕೆ ಸಮಿತಿ ಸದಸ್ಯರು ಶಾಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಹಾಜರುಪಡಿಸುವುದು.

**ಆಯ್ಕೆ ವಿಧಾನ:-**

- **ತಾಲ್ಲೂಕು ಹಂತ:** ಈ ಸಮಿತಿಯು ಅರ್ಜಿ ಸಲ್ಲಿಸಿದ ಶಾಲೆಗಳಿಗೆ ಭೇಟಿ ನೀಡಿ ಅರ್ಜಿಯಲ್ಲಿ ನಿಗದಿ ಪಡಿಸಿರುವ 08 ಪ್ರಮುಖ ಕ್ಷೇತ್ರಗಳನ್ನು ಪೂರಕ ದಾಖಲೆಗಳೊಂದಿಗೆ ಪರಿಶೀಲಿಸಿ, ಒಂದು ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಒಂದು ಸರ್ಕಾರಿ ಪ್ರೌಢ ಶಾಲೆಯನ್ನು ಆಯ್ಕೆ ಮಾಡಿ ಜಿಲ್ಲಾ ಹಂತಕ್ಕೆ ಸಲ್ಲಿಸುವುದು.
- **ಜಿಲ್ಲಾ ಹಂತ:** ಈ ಸಮಿತಿಯು ತಾಲ್ಲೂಕು ಹಂತದಿಂದ ಪ್ರಶಸ್ತಿಗಾಗಿ ಆಯ್ಕೆಯಾದ ಶಾಲೆಗಳಿಗೆ ಭೇಟಿ ನೀಡಿ ತಾಲ್ಲೂಕು ಹಂತದ ವರದಿಗಳನ್ನು ಆಧರಿಸಿ ಅರ್ಜಿಯಲ್ಲಿ ನಿಗದಿ ಪಡಿಸಿರುವ 08 ಪ್ರಮುಖ ಕ್ಷೇತ್ರಗಳನ್ನು ಪೂರಕ ದಾಖಲೆಗಳೊಂದಿಗೆ ಪರಿಶೀಲಿಸಿ, ಜಿಲ್ಲಾ ಹಂತದಿಂದ ಒಂದು ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಒಂದು ಸರ್ಕಾರಿ ಪ್ರೌಢಶಾಲೆಯನ್ನು ಆಯ್ಕೆ ಮಾಡಿ ವಿಭಾಗ ಹಂತಕ್ಕೆ ಸಲ್ಲಿಸುವುದು.
- **ವಿಭಾಗ ಹಂತ:** ಈ ಸಮಿತಿಯು ಜಿಲ್ಲಾ ಹಂತದಿಂದ ಆಯ್ಕೆಯಾದ ಶಾಲೆಗಳಿಗೆ ಭೇಟಿ ನೀಡಿ ಅರ್ಜಿಯಲ್ಲಿ ನಿಗದಿ ಪಡಿಸಿರುವ 08 ಪ್ರಮುಖ ಕ್ಷೇತ್ರಗಳನ್ನು ಪೂರಕ ದಾಖಲೆಗಳೊಂದಿಗೆ ಪರಿಶೀಲಿಸಿ, ಪ್ರತಿ ವಿಭಾಗದಿಂದ ಒಂದು ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಒಂದು ಸರ್ಕಾರಿ ಪ್ರೌಢ ಶಾಲೆಯನ್ನು ಆಯ್ಕೆ ಮಾಡಿ ರಾಜ್ಯ ಹಂತಕ್ಕೆ ಸಲ್ಲಿಸುವುದು.
- **ರಾಜ್ಯ ಹಂತ:** ಈ ಸಮಿತಿಯು ಪ್ರತಿ ವಿಭಾಗ ಹಂತದಿಂದ ಪಡೆಯಲಾದ ಒಂದು ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಒಂದು ಸರ್ಕಾರಿ ಪ್ರೌಢಶಾಲೆಗಳು ಸೇರಿದಂತೆ ಒಟ್ಟು 4 ಸರ್ಕಾರಿ ಪ್ರಾಥಮಿಕಶಾಲೆ ಹಾಗೂ 4 ಸರ್ಕಾರಿ ಪ್ರೌಢ ಶಾಲೆಗಳ ವರದಿ/ದಾಖಲೆಗಳನ್ನು ಪರಿಶೀಲಿಸಿ ಒಟ್ಟು 8 ಸರ್ಕಾರಿ ಶಾಲೆಗಳಿಗೆ ಬಹುಮಾನವನ್ನು ನೀಡುವುದು.

**ನಗದು ಬಹುಮಾನ:-**

ವಿವಿಧ ಹಂತದ ಆಯ್ಕೆ ಸಮಿತಿಗಳ ಶಿಫಾರಸ್ಸಿನಂತೆ ರಾಜ್ಯದ ನಾಲ್ಕು ವಿಭಾಗಗಳಿಂದ ಪ್ರತಿ ವಿಭಾಗದಿಂದ ಒಂದು ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಒಂದು ಸರ್ಕಾರಿ ಪ್ರೌಢಶಾಲೆಯನ್ನು ಅಂದರೆ ಒಟ್ಟು 4 ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ 4 ಸರ್ಕಾರಿ ಪ್ರೌಢ ಶಾಲೆಗಳನ್ನು ಸ್ವಾಭಿಮಾನಿ ಸಾರ್ವಜನಿಕ ಶಾಲೆ ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು. ಆಯ್ಕೆಯಾದ ಶಾಲೆಗಳಿಗೆ **ರೂ.5.00 ಲಕ್ಷಗಳ ನಗದು ಬಹುಮಾನವನ್ನು** ಶಾಲೆಗಳ ಎಸ್.ಡಿ.ಎಂ.ಸಿ ಮತ್ತು ಮುಖ್ಯ ಶಿಕ್ಷಕರ ಜಂಟಿ ಖಾತೆಗೆ ನೀಡಲಾಗುವುದು.

- ಪ್ರಶಸ್ತಿ ಪಡೆದ ಶಾಲೆಗಳು ಬಹುಮಾನದ ಮೊತ್ತವನ್ನು ಶೈಕ್ಷಣಿಕ ಚಟುವಟಿಕೆ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಮಾತ್ರ ಬಳಸಿಕೊಳ್ಳಬೇಕು. ಗ್ರಂಥಾಲಯ, ಕಂಪ್ಯೂಟರ್, ಪ್ರಯೋಗಾಲಯ, ಕ್ರೀಡಾ ಸಾಮಗ್ರಿ ಹಾಗೂ ಮಕ್ಕಳ ಸೃಜನ ಶೀಲತೆಯನ್ನು ಹೆಚ್ಚಿಸುವ ಇತರೆ ಚಟುವಟಿಕೆಗಳು ಇದರಲ್ಲಿ ಸೇರುತ್ತವೆ.

## ವಿವಿಧ ಹಂತದ ಅಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳು

**ಶಾಲಾ ಮುಖ್ಯ ಶಿಕ್ಷಕರು:**

- ಸ್ವಾಭಿಮಾನಿ ಸಾರ್ವಜನಿಕ ಶಾಲೆ ಪ್ರಶಸ್ತಿಗಾಗಿ ಶಾಲಾ ಮುಖ್ಯ ಶಿಕ್ಷಕರು ತಮ್ಮ ಶಾಲೆಯ U-DISE ಸಂಕೇತವನ್ನು USER ID ಯಾಗಿ ಬಳಸಿಕೊಂಡು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬೇಕು.
- ಅರ್ಜಿ ನಮೂನೆಯನ್ನು ಭರ್ತಿ ಮಾಡುವ ಮೊದಲು ಅರ್ಜಿಯಲ್ಲಿ ಕೇಳಲಾಗಿರುವ ಮಾಹಿತಿಗಳನ್ನು ಮತ್ತು ಪೂರಕ ದಾಖಲೆಗಳನ್ನು ಮೊದಲೇ ಸಿದ್ಧಪಡಿಸಿಟ್ಟುಕೊಳ್ಳಬೇಕು.
- ಅರ್ಜಿ ನಮೂನೆಯು ಪಿ.ಡಿ.ಎಫ್ ರೂಪದಲ್ಲಿ ಮಂಡಳಿಯ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಅರ್ಜಿ ಸಲ್ಲಿಸುವ ಮೊದಲು ಹಾರ್ಡ್ ಪ್ರತಿಯನ್ನು ಭರ್ತಿ ಮಾಡಿ ನಂತರ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು.
- ಅರ್ಜಿಯಲ್ಲಿ ಭರ್ತಿ ಮಾಡಲಾಗುವ ಮಾಹಿತಿಗಳು ನೈಜತೆಯಿಂದ ಕೂಡಿರಬೇಕು.

- ಅರ್ಜಿ ಸಲ್ಲಿಸಿದ' ನಂತರ ಅರ್ಜಿಯ ಒಂದು ಪ್ರತಿಯನ್ನು print ತೆಗೆದುಕೊಂಡು ಶಾಲೆಯಲ್ಲಿ ಕಾಯ್ದಿರಿಸಬೇಕು ಮತ್ತು ವಿವಿಧ ಹಂತದ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸುವ ಸಂದರ್ಭದಲ್ಲಿ ಪೂರಕ ದಾಖಲೆಗಳನ್ನು ಹಾಜರುಪಡಿಸುವುದು.
- ರಾಜ್ಯ ಕಛೇರಿಯಿಂದ ಕಾಲಕಾಲಕ್ಕೆ ನೀಡುವ ಸುತ್ತೋಲೆ ಮತ್ತು ಮಾರ್ಗಸೂಚಿಗಳನ್ನು ಅನುಸರಿಸುವುದು.

**ಆನ್‌ಲೈನ್ ಅರ್ಜಿ ಸಲ್ಲಿಸುವ ವಿಧಾನ:**

- ಆನ್‌ಲೈನ್ ಅರ್ಜಿಯು ಮಂಡಳಿಯ ಜಾಲತಾಣ https://sslc.karnataka.gov.in ನಲ್ಲಿರುವ ಶಾಲಾಲಾಗಿನ್ ನಲ್ಲಿ ಲಭ್ಯಮಾಡಲಾಗಿದೆ.
- USER ID - ಶಾಲಾ U-DISE ಸಂಕೇತವಾಗಿರುತ್ತದೆ.
- Password – default password ಶಾಲಾ U-DISE@123 (ಉದಾ: 29280203703@123) ಆಗಿರುತ್ತದೆ.
- default password ನಲ್ಲಿ ಲಾಗಿನ್ ಆದ ನಂತರ ಮುಖ್ಯ ಶಿಕ್ಷಕರು ತಮ್ಮ ಮೊಬೈಲ್ ಸಂಖ್ಯೆಯನ್ನು ನಮೂದಿಸಿ Enter button click ಮಾಡುವುದು.
- ರಿಜಿಸ್ಟರ್ ಮಾಡಿದ ಮೊಬೈಲ್ ಸಂಖ್ಯೆಗೆ ಬರುವ OTP ಯನ್ನು ನಮೂದಿಸಿ password change ಮಾಡಿಕೊಳ್ಳುವುದು.
- New password ಬಳಸಿ ಮತ್ತೊಮ್ಮೆ login ಆಗುವುದು.
- ಲಾಗಿನ್ ಆದ ನಂತರ User Manual ನಲ್ಲಿ ನೀಡಲಾಗಿರುವ ಹಂತಗಳನ್ನು ಅನುಸರಿಸಿ ಅರ್ಜಿ ಭರ್ತಿ ಮಾಡುವುದು.

**ತಾಲ್ಲೂಕು ಹಂತದ ಆಯ್ಕೆ ಸಮಿತಿಯ ಜವಾಬ್ದಾರಿಗಳು:**

- ಅರ್ಹ ಶಾಲೆಗಳು ಹೆಚ್ಚಿನ ಸಂಖ್ಯೆಯಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಂತೆ ಕ್ರಮವಹಿಸುವುದು.
- ಅರ್ಜಿ ಸಲ್ಲಿಸಿರುವ ಶಾಲೆಗಳ ವಿವರವನ್ನು ಕೆ.ಎಸ್.ಇ.ಇ.ಬಿ ವೆಬ್‌ಸೈಟ್‌ನಲ್ಲಿರುವ ಬಿ.ಇ.ಓ ಲಾಗಿನ್‌ನಲ್ಲಿ ಲಭ್ಯಮಾಡಲಾಗುವುದು. ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ಲಾಗಿನ್‌ನಲ್ಲಿ ಲಭ್ಯವಿರುವ ಶಾಲೆಗಳಲ್ಲಿ ಉತ್ತಮ ಶಾಲೆಗಳಿಗೆ ಸರ್ಕಾರಿ ಆದೇಶದಂತೆ ನಿಗದಿತ ಸದಸ್ಯರ ತಂಡದೊಂದಿಗೆ ಭೇಟಿ ನೀಡಿ ಸಮಗ್ರವಾಗಿ ಪರಿಶೀಲಿಸಿ ಒಂದು ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಒಂದು ಸರ್ಕಾರಿ ಪ್ರೌಢಶಾಲೆಯನ್ನು ಆಯ್ಕೆ ಮಾಡಿ ಜಿಲ್ಲಾ ಹಂತಕ್ಕೆ ಶಿಫಾರಸ್ಸು ಮಾಡುವುದು.
- ಪರಿಶೀಲನೆಯ ಸಂದರ್ಭದಲ್ಲಿ ಮುಖ್ಯ ಶಿಕ್ಷಕರು ಆನ್‌ಲೈನ್‌ನಲ್ಲಿ ಸಲ್ಲಿಸಿರುವ ಅರ್ಜಿಯಲ್ಲಿ ಯಾವುದೇ ಮಾಹಿತಿಗಳು ಶಾಲೆಗೆ ಭೇಟಿ ನೀಡಿ ವಾಸ್ತವಿಕ ಅಂಶಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ತಾಳೆ ಹೊಂದದಿದ್ದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ಲಾಗಿನ್‌ನಲ್ಲಿ ತಿದ್ದುಪಡಿಗಳನ್ನು ಅಳವಡಿಸಲು ಅವಕಾಶವನ್ನು ಕಲ್ಪಿಸಲಾಗಿದ್ದು, ಅಗತ್ಯವಿದ್ದಲ್ಲಿ ತಿದ್ದುಪಡಿಗಳನ್ನು ಅಳವಡಿಸಿ ಅರ್ಜಿಯನ್ನು freeze ಮಾಡುವ ಮೊದಲು ಎಲ್ಲಾ ಮಾಹಿತಿಗಳನ್ನು ಪರಿಶೀಲಿಸಿ ಅರ್ಹ ಒಂದು ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಒಂದು ಸರ್ಕಾರಿ ಪ್ರೌಢಶಾಲೆ ಸೇರಿ ಒಟ್ಟು 02 ಶಾಲೆಗಳನ್ನು ಆಯ್ಕೆ / Approve ಮಾಡುವುದು. ತಾಲ್ಲೂಕು ಹಂತದಿಂದ ಜಿಲ್ಲಾ ಹಂತಕ್ಕೆ ಆಯ್ಕೆಯಾದ ಶಾಲೆಗಳು ಭರ್ತಿ ಮಾಡಿದ ಅರ್ಜಿ ನಮೂನೆಯೊಂದಿಗೆ ಅಗತ್ಯ ಪೂರಕ ದಾಖಲೆಗಳನ್ನು ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರಿಗೆ ಸಲ್ಲಿಸಬೇಕು.
- ತಾಲ್ಲೂಕು ಹಂತದಿಂದ ಆಯ್ಕೆ ಮಾಡಿ ಜಿಲ್ಲಾ ಹಂತಕ್ಕೆ ಸಲ್ಲಿಕೆಯಾಗುವ ಶಾಲೆಗಳಿಗೆ ಭೇಟಿ ನೀಡುವ ಸಂಬಂಧ ತಾಲ್ಲೂಕು ಹಂತದ ಆಯ್ಕೆ ಸಮಿತಿಯ ಮೇಲುಸ್ತುವಾರಿಯನ್ನು ವಹಿಸಿಕೊಳ್ಳುವುದು.
- ಅರ್ಜಿಯಲ್ಲಿ ಭರ್ತಿ ಮಾಡಲಾಗಿರುವ ಮಾಹಿತಿಗಳನ್ನು ಶಾಲೆಯ ವಾಸ್ತವಿಕಾಂಶಗಳೊಂದಿಗೆ ಪರಿಶೀಲಿಸಿ ಯಾವುದೇ ವಿವಾದಕ್ಕೆ ಆಸ್ಪದ ನೀಡದಂತೆ ಹಾಗೂ ರಾಜ್ಯ ಕಛೇರಿಯಿಂದ ನೀಡಲಾದ ಎಲ್ಲಾ ಮಾನದಂಡಗಳು / ಸೂಚ್ಯಾಂಕಗಳನ್ನು ಆಧರಿಸಿ ಅತ್ಯುತ್ತಮವಾದ ಒಂದು ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಒಂದು ಸರ್ಕಾರಿ ಪ್ರೌಢಶಾಲೆಯನ್ನು ಆಯ್ಕೆ ಮಾಡುವುದು.
- ತಾಲ್ಲೂಕು ಹಂತದ ಆಯ್ಕೆ ಸಮಿತಿಯು ನಿಷ್ಪಕ್ಷಪಾತವಾಗಿ ಮತ್ತು ಪಾರದರ್ಶಕವಾಗಿ ತಾಲ್ಲೂಕು ಹಂತದಲ್ಲಿ ಶಾಲೆಗಳನ್ನು ಆಯ್ಕೆ ಮಾಡಿ ಜಿಲ್ಲಾ ಹಂತಕ್ಕೆ ಸಲ್ಲಿಸುವುದು.

- ಈ ಪ್ರಶಸ್ತಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ರಾಜ್ಯ ಕಛೇರಿಯಿಂದ ನೀಡುವ ಮಾರ್ಗಸೂಚಿ ಹಾಗೂ ಜಿಲ್ಲಾ ಉಪನಿರ್ದೇಶಕರು, ಆಡಳಿತ ರವರು ನೀಡುವ ಎಲ್ಲಾ ಸೂಚನೆಗಳನ್ನು ಪಾಲಿಸುವುದು.

**ಜಿಲ್ಲಾ ಹಂತದ ಆಯ್ಕೆ ಸಮಿತಿಯ ಜವಾಬ್ದಾರಿಗಳು:**

- ಅರ್ಹತೆ ಹೊಂದಿರುವ ಶಾಲೆಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಂತೆ ಕ್ರಮವಹಿಸುವುದು.
- ತಾಲ್ಲೂಕು ಹಂತದಿಂದ ಆಯ್ಕೆ ಮಾಡಿ ಜಿಲ್ಲಾ ಹಂತಕ್ಕೆ ಸಲ್ಲಿಕೆಯಾಗಿರುವ ಶಾಲೆಗಳಿಗೆ ಭೇಟಿ ನೀಡುವ ಸಂಬಂಧ ಜಿಲ್ಲಾ ಹಂತದ ಆಯ್ಕೆ ಸಮಿತಿಯ ಮೇಲುಸ್ತುವಾರಿಯನ್ನು ವಹಿಸಿಕೊಳ್ಳುವುದು.
- ಅರ್ಜಿಯಲ್ಲಿ ಭರ್ತಿ ಮಾಡಲಾಗಿರುವ ಮಾಹಿತಿಗಳನ್ನು ಶಾಲೆಯ ವಾಸ್ತವಿಕಾಂಶಗಳೊಂದಿಗೆ ಪರಿಶೀಲಿಸಿ ಯಾವುದೇ ವಿವಾದಕ್ಕೆ ಆಸ್ಪದ ನೀಡದಂತೆ ಹಾಗೂ ರಾಜ್ಯ ಕಛೇರಿಯಿಂದ ನೀಡಲಾದ ಎಲ್ಲಾ ಮಾನದಂಡಗಳು / ಸೂಚ್ಯಾಂಕಗಳನ್ನು ಆಧರಿಸಿ ಅತ್ಯುತ್ತಮವಾದ ಒಂದು ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಒಂದು ಸರ್ಕಾರಿ ಪ್ರೌಢಶಾಲೆಯನ್ನು ಆಯ್ಕೆ ಮಾಡುವುದು.
- ಜಿಲ್ಲಾ ಹಂತದ ಆಯ್ಕೆ ಸಮಿತಿಯು ನಿಶ್ಪಕ್ಷಪಾತವಾಗಿ ಮತ್ತು ಪಾರದರ್ಶಕವಾಗಿ ಜಿಲ್ಲಾ ಹಂತದಲ್ಲಿ ಶಾಲೆಗಳನ್ನು ಆಯ್ಕೆ ಮಾಡಿ ವಿಭಾಗ ಹಂತಕ್ಕೆ ಸಲ್ಲಿಸುವುದು.
- ಜಿಲ್ಲಾ ಹಂತದ ಆಯ್ಕೆ ಸಮಿತಿಯ(ಸರ್ಕಾರದ ಆದೇಶದಂತೆ) ಇತರೆ ಸದಸ್ಯರೊಂದಿಗೆ ಶಾಲೆಗಳಿಗೆ ಖುದ್ದು ಭೇಟಿ ನೀಡಿ ರಾಜ್ಯ ಕಛೇರಿಯಿಂದ ನೀಡಲಾದ ಎಲ್ಲಾ ಮಾನದಂಡಗಳನ್ನು(ಸೂಚ್ಯಾಂಕಗಳು) ಅನುಸರಿಸಿ ಅತ್ಯುತ್ತಮವಾದ ಒಂದು ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಒಂದು ಸರ್ಕಾರಿ ಪ್ರೌಢಶಾಲೆಯ ವರದಿ/ದಾಖಲೆಗಳನ್ನು ವಿಭಾಗ ಹಂತಕ್ಕೆ ಸಲ್ಲಿಸುವುದು.
- ಈ ಪ್ರಶಸ್ತಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ರಾಜ್ಯ ಕಛೇರಿಯಿಂದ ನೀಡುವ ಮಾರ್ಗಸೂಚಿ ಹಾಗೂ ವಿಭಾಗ ಹಂತದ ಅಧಿಕಾರಿಗಳು ನೀಡುವ ಎಲ್ಲಾ ಸೂಚನೆಗಳನ್ನು ಪಾಲಿಸುವುದು.

**ವಿಭಾಗ ಹಂತದ ಆಯ್ಕೆ ಸಮಿತಿಯ ಜವಾಬ್ದಾರಿಗಳು:**

- ಜಿಲ್ಲಾ ಹಂತದಿಂದ ಆಯ್ಕೆ ಮಾಡಿ ವಿಭಾಗ ಹಂತಕ್ಕೆ ಸಲ್ಲಿಕೆಯಾಗಿರುವ ಶಾಲೆಗಳಿಗೆ ಭೇಟಿ ನೀಡುವ ಸಂಬಂಧ ವಿಭಾಗ ಹಂತದ ಆಯ್ಕೆ ಸಮಿತಿಯ ಮೇಲುಸ್ತುವಾರಿಯನ್ನು ವಿಭಾಗೀಯ ಸಹ ನಿರ್ದೇಶಕರು ವಹಿಸಿಕೊಳ್ಳುವುದು.
- ಅರ್ಜಿಯಲ್ಲಿ ಭರ್ತಿ ಮಾಡಲಾಗಿರುವ ಮಾಹಿತಿಗಳನ್ನು ಶಾಲೆಯ ವಾಸ್ತವಿಕಾಂಶಗಳೊಂದಿಗೆ ಪರಿಶೀಲಿಸಿ ಯಾವುದೇ ವಿವಾದಕ್ಕೆ ಆಸ್ಪದ ನೀಡದಂತೆ ಹಾಗೂ ರಾಜ್ಯ ಕಛೇರಿಯಿಂದ ನೀಡಲಾದ ಎಲ್ಲಾ ಮಾನದಂಡಗಳು / ಸೂಚ್ಯಾಂಕಗಳನ್ನು ಆಧರಿಸಿ ಅತ್ಯುತ್ತಮವಾದ ಒಂದು ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಒಂದು ಸರ್ಕಾರಿ ಪ್ರೌಢಶಾಲೆಯನ್ನು ಆಯ್ಕೆ ಮಾಡುವುದು.
- ವಿಭಾಗ ಹಂತದ ಆಯ್ಕೆ ಸಮಿತಿಯ(ಸರ್ಕಾರದ ಆದೇಶದಂತೆ) ಇತರೆ ಸದಸ್ಯರೊಂದಿಗೆ ಶಾಲೆಗಳಿಗೆ ಖುದ್ದು ಭೇಟಿ ನೀಡಿ ರಾಜ್ಯ ಕಛೇರಿಯಿಂದ ನೀಡಲಾದ ಎಲ್ಲಾ ಮಾನದಂಡಗಳನ್ನು(ಸೂಚ್ಯಾಂಕಗಳು) ಅನುಸರಿಸಿ ಅತ್ಯುತ್ತಮವಾದ ಒಂದು ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಒಂದು ಸರ್ಕಾರಿ ಪ್ರೌಢಶಾಲೆಯ ವರದಿ/ದಾಖಲೆಗಳನ್ನು ರಾಜ್ಯ ಕಛೇರಿಗೆ ಸಲ್ಲಿಸುವುದು.
- ವಿಭಾಗ ಹಂತದ ಆಯ್ಕೆ ಸಮಿತಿಯು ನಿಶ್ಪಕ್ಷಪಾತವಾಗಿ ಮತ್ತು ಪಾರದರ್ಶಕವಾಗಿ ಶಾಲೆಗಳನ್ನು ಆಯ್ಕೆ ಮಾಡಿ ರಾಜ್ಯ ಹಂತಕ್ಕೆ ಸಲ್ಲಿಸುವುದು.
- ಈ ಪ್ರಶಸ್ತಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ರಾಜ್ಯ ಕಛೇರಿಯಿಂದ ನೀಡುವ ಮಾರ್ಗಸೂಚಿ ಹಾಗೂ ರಾಜ್ಯ ಕಛೇರಿಯಿಂದ ನೀಡಲಾಗುವ ಎಲ್ಲಾ ಸೂಚನೆಗಳನ್ನು ಪಾಲಿಸುವುದು.

**'ಸ್ವಾಭಿಮಾನಿ ಸಾರ್ವಜನಿಕ ಶಾಲೆ'** ಪ್ರಶಸ್ತಿ ಕಾರ್ಯಕ್ರಮವು ಅತ್ಯಂತ ದೂರದೃಷ್ಟಿವುಳ್ಳ ಪ್ರೋತ್ಸಾಹದಾಯಕವಾದ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮದ ಮೂಲಕ ಶೈಕ್ಷಣಿಕ, ಆಡಳಿತಾತ್ಮಕ ಮತ್ತು ನಾವಿನ್ಯಯುತ ಮುಂತಾದ ಕ್ಷೇತ್ರಗಳಲ್ಲಿ

ಉತ್ತಮ ಸಾಧನೆಗೈದಿರುವ ಶಾಲೆಗಳ ಭಾಗೀದಾರರನ್ನು ಗುರುತಿಸಿ, ಪ್ರೋತ್ಸಾಹಿಸುವ ಮತ್ತು ಅಂತಹ ಶಾಲೆಗಳನ್ನು ಮತ್ತಷ್ಟು ಉನ್ನತೀಕರಿಸಲು ಆರ್ಥಿಕ ನೆರವನ್ನು ಒದಗಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿದೆ. ಈ ಶಾಲೆಗಳನ್ನು ಮಾದರಿಯನ್ನಾಗಿಟ್ಟುಕೊಂಡು ರಾಜ್ಯದಲ್ಲಿ ಪ್ರಗತಿಯ ಹಾದಿಯಲ್ಲಿರುವ ಹಾಗೂ ಇನ್ನೂ ಪ್ರಗತಿಯನ್ನು ಹೊಂದಬೇಕಾಗಿರುವ ಸರ್ಕಾರಿ ಶಾಲೆಗಳಿಗೆ ಪ್ರೇರಣೆ ನೀಡಿ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳು ಉನ್ನತ ಗುಣಮಟ್ಟದ ಶಿಕ್ಷಣವನ್ನು ನೀಡುವತ್ತಾ ಸಬಲೀಕರಣಗೊಳಿಸುವ ಗುರಿಯನ್ನು ಹೊಂದಿದೆ. ಹಾಗಾಗಿ **'ಸ್ವಾಭಿಮಾನಿ ಸಾರ್ವಜನಿಕ ಶಾಲೆ' ಪ್ರಶಸ್ತಿ ಆಯ್ಕೆ** ಪ್ರಕ್ರಿಯೆಯ ತಾಲ್ಲೂಕು, ಜಿಲ್ಲಾ, ವಿಭಾಗ ಹಂತದ ಆಯ್ಕೆ ಸಮಿತಿ ಸದಸ್ಯರು ರಾಜ್ಯ ಕಛೇರಿಯಿಂದ ನೀಡಲಾಗಿರುವ ಮಾರ್ಗಸೂಚಿಯಂತೆ ಉತ್ತಮವಾದ ಸರ್ಕಾರಿ ಶಾಲೆಗಳನ್ನು ಆಯ್ಕೆ ಮಾಡಲು ಎಲ್ಲಾ ಹಂತದ ಅಧಿಕಾರಿಗಳಿಗೆ ಸೂಚಿಸಿದೆ.

(ಗೋಪಾಲಕೃಷ್ಣ.ಹೆಚ್.ಎನ್)
ಕಾರ್ಯನಿರ್ವಾಹಕ ನಿರ್ದೇಶಕರು,
ಕೆ.ಎಸ್.ಕ್ಯೂ.ಎ.ಎ.ಸಿ.
29/3/22

ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ:-

1. ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿಯ ಅಧ್ಯಕ್ಷರು ರವರಿಗೆ.
2. ಸಂಬಂಧಿಸಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ರವರಿಗೆ.
3. ಸಂಬಂಧಿಸಿದ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು(ಪರೀಕ್ಷೆಗಳು) ರವರಿಗೆ.
4. ಸಂಬಂಧಿಸಿದ ಪ್ರಾಂಶುಪಾಲರು, ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ(ಸಿ.ಟಿ.ಇ) ರವರಿಗೆ.
5. ಸಂಬಂಧಿಸಿದ ತಾಲ್ಲೂಕು ಪಂಚಾಯತ್ ಅಧ್ಯಕ್ಷರು ರವರಿಗೆ.
6. ಸಂಬಂಧಿಸಿದ ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳು ರವರಿಗೆ.
7. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ),ಸಾ.ಶಿ.ಇ. ರವರಿಗೆ.
8. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಅಭಿವೃದ್ಧಿ), ಸಾ.ಶಿ.ಇ. ರವರಿಗೆ.
9. ರಾಜ್ಯದ ಎಲ್ಲಾ ಬ್ಲಾಕ್‌ಗಳ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾ.ಶಿ.ಇ. ರವರಿಗೆ.
10. ಎಲ್ಲಾ ಪ್ರಾಥಮಿಕ ಶಾಲೆ ಹಾಗೂ ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರು/ಪ್ರಾಂಶುಪಾಲರಿಗೆ (ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾ.ಶಿ.ಇ ರವರ ಮೂಲಕ).

ಪ್ರತಿಯನ್ನು :-

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಬಹುಮಹಡಿಗಳಕಟ್ಟಡ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ.
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ-ಕರ್ನಾಟಕ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ.
4. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ.
5. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ.
6. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು ರವರಿಗೆ ಮಾಹಿತಿಗಾಗಿ.
7. ನಿರ್ದೇಶಕರು ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಮಾಹಿತಿಗಾಗಿ.
8. ನಿರ್ದೇಶಕರು ಉರ್ದು ಮತ್ತು ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಮಾಹಿತಿಗಾಗಿ.
9. ನಿರ್ದೇಶಕರು ಪ್ರೌಢ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಮಾಹಿತಿಗಾಗಿ.
10. ಉಪನಿರ್ದೇಶಕರು ಹಾಗೂ ಪ್ರಭಾರಾಧಿಕಾರಿಗಳು ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು ರವರಿಗೆ ಮಾಹಿತಿಗಾಗಿ
11. ಕಛೇರಿ ಪ್ರತಿ.

# ಅನುಬಂಧ-1

**ಸರ್ಕಾರದ ಆದೇಶ ಸಂಖ್ಯೆ: ಇಡಿ 170 ಎಸ್‌ಎಲ್‌ಬಿ 2020, ದಿನಾಂಕ:13/11/2020**

**'ಸ್ವಾಭಿಮಾನಿ ಸಾರ್ವಜನಿಕ ಶಾಲೆ'-ಉತ್ತಮ ಆಡಳಿತ ಹಾಗೂ ಶೈಕ್ಷಣಿಕ ನಿರ್ವಹಣೆಯನ್ನು ಹೊಂದಿರುವ ಸರ್ಕಾರಿ ಶಾಲೆಗಳನ್ನು ಗುರುತಿಸಿ ಪ್ರಶಸ್ತಿಯನ್ನು ನೀಡುವ ಕಾರ್ಯಕ್ರಮದ ಸಮಿತಿಗಳ ವಿವರ**

## ತಾಲ್ಲೂಕು ಹಂತದ ಆಯ್ಕೆ ಸಮಿತಿ

| | | |
|---|---|---|
| 1. ತಾಲ್ಲೂಕು ಪಂಚಾಯತ್ ಅಧ್ಯಕ್ಷರು | - | ಅಧ್ಯಕ್ಷರು |
| 2. ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳು | - | ಉಪಾಧ್ಯಕ್ಷರು |
| 3. ಕ್ಷೇತ್ರ ಶಿಕ್ಷಣಾಧಿಕಾರಿಗಳು | - | ಸದಸ್ಯ ಕಾರ್ಯದರ್ಶಿಗಳು |
| 4. ತಾಲ್ಲೂಕು ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷರು | - | ಸದಸ್ಯರು |
| 5. ತಾಲ್ಲೂಕು ಪ್ರಾಥಮಿಕ ಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷರು | - | ಸದಸ್ಯರು |
| 6. ಸೇವಾ ಹಿರಿತನದ ಒಬ್ಬರು ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು | - | ಸದಸ್ಯರು |
| 7. ಸೇವಾ ಹಿರಿತನದ ಒಬ್ಬರು ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು | - | ಸದಸ್ಯರು |
| 8. ತಾಲ್ಲೂಕಿನ ಒಬ್ಬರು ಶಿಕ್ಷಣ ತಜ್ಞರು | - | ಸದಸ್ಯರು |
| 9. ಒಬ್ಬರು ಎಸ್.ಡಿ.ಎಂ.ಸಿ ಅಧ್ಯಕ್ಷರು | - | ಸದಸ್ಯರು |

## ಜಿಲ್ಲಾ ಹಂತದ ಆಯ್ಕೆ ಸಮಿತಿ

| | | |
|---|---|---|
| 1. ಜಿಲ್ಲಾ ಪಂಚಾಯತ್‌ನ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿಯ ಅಧ್ಯಕ್ಷರು | - | ಅಧ್ಯಕ್ಷರು |
| 2. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು | - | ಉಪಾಧ್ಯಕ್ಷರು |
| 3. ಉಪನಿರ್ದೇಶಕರು (ಆಡಳಿತ) | - | ಸದಸ್ಯ ಕಾರ್ಯದರ್ಶಿಗಳು |
| 4. ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ) | - | ಸದಸ್ಯರು |
| 5. ಜಿಲ್ಲೆಯ ಒಬ್ಬರು ಹಿರಿಯ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರು (ಆಡಳಿತ) ರವರ ಕಛೇರಿ | - | ಸದಸ್ಯರು |
| 6. ಸೇವಾ ಹಿರಿತನದ ಒಬ್ಬರು ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು | - | ಸದಸ್ಯರು |
| 7. ಜಿಲ್ಲೆಯ ಸರ್ಕಾರಿ ಪ್ರೌಢ ಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷರು | - | ಸದಸ್ಯರು |
| 8. ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರು | - | ಸದಸ್ಯರು |
| 9. ಜಿಲ್ಲೆಯ ಒಬ್ಬರು ಶಿಕ್ಷಣ ತಜ್ಞರು | - | ಸದಸ್ಯರು |

# ವಿಭಾಗ ಹಂತದ ಆಯ್ಕೆ ಸಮಿತಿ

## ಬೆಂಗಳೂರು ವಿಭಾಗ

1. ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು (ಪರೀಕ್ಷೆಗಳು) – ಅಧ್ಯಕ್ಷರು
2. ಪ್ರಾಂಶುಪಾಲರು, ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (CTE), ಚಿತ್ರದುರ್ಗ – ಉಪಾಧ್ಯಕ್ಷರು
3. ಒಬ್ಬರು ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, – ಸದಸ್ಯ ಕಾರ್ಯದರ್ಶಿಗಳು
4. ಒಬ್ಬರು ಪ್ರವಾಚಕರು, ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (CTE), ಚಿತ್ರದುರ್ಗ – ಸದಸ್ಯರು
5. ಒಬ್ಬರು ಕ್ಷೇತ್ರಶಿಕ್ಷಣಾಧಿಕಾರಿಗಳು, – ಸದಸ್ಯರು
6. ಒಬ್ಬರು ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಜಿಲ್ಲಾ ಪಂಚಾಯತ್, – ಸದಸ್ಯರು
7. ಒಬ್ಬರು ಶಿಕ್ಷಣ ತಜ್ಞರು – ಸದಸ್ಯರು

## ಮೈಸೂರು ವಿಭಾಗ

1. ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು (ಪರೀಕ್ಷೆಗಳು) – ಅಧ್ಯಕ್ಷರು
2. ಪ್ರಾಂಶುಪಾಲರು, ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (CTE), ಮೈಸೂರು – ಉಪಾಧ್ಯಕ್ಷರು
3. ಒಬ್ಬರು ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, – ಸದಸ್ಯ ಕಾರ್ಯದರ್ಶಿಗಳು
4. ಒಬ್ಬರು ಪ್ರವಾಚಕರು, ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (CTE), ಮಂಗಳೂರು – ಸದಸ್ಯರು
5. ಒಬ್ಬರು ಕ್ಷೇತ್ರಶಿಕ್ಷಣಾಧಿಕಾರಿಗಳು, – ಸದಸ್ಯರು
6. ಒಬ್ಬರು ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಜಿಲ್ಲಾ ಪಂಚಾಯತ್, – ಸದಸ್ಯರು
7. ಒಬ್ಬರು ಶಿಕ್ಷಣ ತಜ್ಞರು – ಸದಸ್ಯರು

## ಬೆಳಗಾವಿ ವಿಭಾಗ

1. ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು(ಪರೀಕ್ಷೆಗಳು) – ಅಧ್ಯಕ್ಷರು
2. ಪ್ರಾಂಶುಪಾಲರು, ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (CTE), ಬೆಳಗಾವಿ – ಉಪಾಧ್ಯಕ್ಷರು
3. ಒಬ್ಬರು ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, – ಸದಸ್ಯ ಕಾರ್ಯದರ್ಶಿಗಳು
4. ಒಬ್ಬರು ಪ್ರವಾಚಕರು, ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (CTE), ಬೆಳಗಾವಿ – ಸದಸ್ಯರು
5. ಒಬ್ಬರು ಕ್ಷೇತ್ರಶಿಕ್ಷಣಾಧಿಕಾರಿಗಳು, – ಸದಸ್ಯರು
6. ಒಬ್ಬರು ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಜಿಲ್ಲಾ ಪಂಚಾಯತ್, – ಸದಸ್ಯರು
7. ಒಬ್ಬರು ಶಿಕ್ಷಣ ತಜ್ಞರು – ಸದಸ್ಯರು

## ಕಲ್ಬುರ್ಗಿ ವಿಭಾಗ



| | | |
|---|---|---|
| 1. ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು (ಪರೀಕ್ಷೆಗಳು) | - | ಅಧ್ಯಕ್ಷರು |
| 2. ಪ್ರಾಂಶುಪಾಲರು, ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (CTE), ಕಲ್ಬುರ್ಗಿ | - | ಉಪಾಧ್ಯಕ್ಷರು |
| 3. ಒಬ್ಬರು ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, | - | ಸದಸ್ಯ ಕಾರ್ಯದರ್ಶಿಗಳು |
| 4. ಒಬ್ಬರು ಪ್ರವಾಚಕರು, ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (CTE), ಕಲ್ಬುರ್ಗಿ | - | ಸದಸ್ಯರು |
| 5. ಒಬ್ಬರು ಕ್ಷೇತ್ರಶಿಕ್ಷಣಾಧಿಕಾರಿಗಳು, | - | ಸದಸ್ಯರು |
| 6. ಒಬ್ಬರು ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಜಿಲ್ಲಾ ಪಂಚಾಯತ್, | - | ಸದಸ್ಯರು |
| 7. ಒಬ್ಬರು ಶಿಕ್ಷಣ ತಜ್ಞರು | - | ಸದಸ್ಯರು |

## ರಾಜ್ಯ ಹಂತದ ಆಯ್ಕೆ ಸಮಿತಿ

| | | |
|---|---|---|
| 1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | - | ಅಧ್ಯಕ್ಷರು |
| 2. ನಿರ್ದೇಶಕರು (ಪರೀಕ್ಷೆಗಳು), ಕೆ.ಎಸ್.ಇ.ಇ.ಬಿ | - | ಉಪಾಧ್ಯಕ್ಷರು |
| 3. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ | - | ಸದಸ್ಯರು |
| 4. ನಿರ್ದೇಶಕರು, ಪ್ರೌಢ ಶಿಕ್ಷಣ | - | ಸದಸ್ಯರು |
| 5. ಸಹನಿರ್ದೇಶಕರು (ಶಾಲಾ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು | - | ಸದಸ್ಯ ಕಾರ್ಯದರ್ಶಿಗಳು |
| 6. ಉಪನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಧಾರವಾಡ | - | ಸದಸ್ಯರು |
| 7. ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, | - | ಸದಸ್ಯರು |
| 8. ಉಪನಿರ್ದೇಶಕರು, ಕೆ.ಎಸ್.ಕ್ಯು.ಎ.ಎ.ಸಿ | - | ಸದಸ್ಯರು |
| 9. ಮೂವರು ಸರ್ಕಾರೇತರ ಸದಸ್ಯರು (ಸರ್ಕಾರ / ಆಯುಕ್ತರಿಂದ ನಾಮನಿರ್ದೇಶಿತಗೊಂಡವರು) | - | ಸದಸ್ಯರು |

(ಬಿ.ಎನ್ ಭಾಗ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಶಿಕ್ಷಣ ಇಲಾಖೆ.[ಪ್ರೌಢಶಿಕ್ಷಣ].